ಮುಂದಕ್ಕೆ ಹೋಗುತ್ತಿದೆ. ಆದಷ್ಟು ಬೇಗ ಆ ಕಡೆಗೆ ಗಮನ ಕೊಡುತ್ತೇವೆ. ಕೃಷ್ಣಪ್ಪ ಗಾರ್ಡನ್ ವಿಚಾರ ೧೯೫೫ನೇ ಇಸವಿಯಲ್ಲಿ ಉಳಿದಿದೆ. ಇನ್ನೊಂದು ೧೯೫೨ನೇ ಇಸವಿಯಿಂದ ಹಾಗೆಯೇ ಉಳಿದಿದೆ. ಕೆಲವು ಕಡೆ ಅಭಿವೃದ್ಧಿ ಕೆಲಸ ಕಾರ್ಯಗಳು ಆಗುತ್ತಾ ಇರುವುದನ್ನು ತಡೆಹಿಡಿದಿದ್ದಾರೆ. ಮಂತ್ರಿ ಕೆಲವು ಕಡೆಗಳಲ್ಲಿ ತಡೆಯಾಜ್ಞೆ ಬಂದಿದೆ. ಮಾನ್ಯ ಸದಸ್ಯರು ಮತ್ತೊಂದು ಕೊಳಚೆ ಪ್ರದೇಶದ ಬಗ್ಗೆ ಸ್ವಲ್ಪ ತೊಂದರೆ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಿರ್ದಿಷ್ಟವಾದ ವಿವರಗಳನ್ನು ಸರಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.— ಸರಕಾರದವರು ಈ ಬಗ್ಗೆ ಯಾವುದಾದರೂ ಟ್ರಿಬ್ಯುನಲ್ ಟೈಪ್ ಮಾಡಿ ಇಲ್ಲಿ ಇಂತಹ ವಾದಗಳು ಇತ್ಯರ್ಥವಾಗಂಪ ಹಾಗೆ ಮಾಡಬೇಕು. ಏಕೆಂದರೆ ಇಂತಹ ವಿಚಾರಗಳನ್ನು ಕೋರ್ಟ್‌ನ ಪರ್‌ಪ್ಯೂನಿಂದ ಹೊರಗೆ ತಂದು ಟ್ರಿಬ್ಯೂನಲ್‌ನಿಂದ ಬೇಗನೇ ಇತ್ಯರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಹೀಗೆ ವಿಳಂಬವಾಗುತ್ತಿರುವುದರಿಂದ ತುಂಬಾ ಅನಾನುಕೂಲಗಳು ಆಗುತ್ತಾ ಇವೆ. ಉದಾಹರಣೆಗೆ ಹುಡ್ಕೋದಿಂದ ಸ್ಲಮ್ ಇಪ್ರೂವ್‌ಮೆಂಟ್‌ಗೆ ಎಂದು ಕೋಟ್ಯಾಂತರ ರೂಪಾಯಿಗಳು ಬಂದಿವೆ. ಆದರೆ ಹೈಕೋರ್ಟ್‌ನಿಂದ ತಡೆಯಾಜ್ಞೆ ಇರುವ ಕಾರಣ ಆ ಹಣವನ್ನು ಸೂಕ್ತ ರೀತಿಯಲ್ಲಿ ಸ್ಲಮ್ ಅಭಿವೃದ್ಧಿಗೆ ಉಪಯೋಗ ಮಾಡುವುದಕ್ಕಾಗುತ್ತಿಲ್ಲ. ಆ ಹಣವು ಲ್ಯಾಪ್ಸ್ ಆಗುತ್ತಾ ಇದೆ. ಆದ ಕಾರಣ ಸರಕಾರದವರು ಯಾವುದಾದರೂ ಒಂದು ಟ್ರಿಬ್ಯುನಲ್ ನೇಮಕ ಮಾಡಿ ಈ ನೇಸ್‌ಗಳನ್ನು ಇತ್ಯರ್ಥ ಮಾಡಿದರೆ ಆ ಪ್ರದೇಶಗಳವರಿಗೆ, ಬಡವರಿಗೆ ಅನುಕೂಲವಾಗುತ್ತದೆ. ಈ ದಿಶೆಯಲ್ಲಿ ಮಾನ್ಯ ಸಚಿವರು ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಚಂದ್ರಶೇಖರ್.— ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅವರ ಕ್ಷೇತ್ರದಲ್ಲಿ ಲಕ್ಷ್ಮೀ ಟಾಕೀಸ್ ಹಿಂಭಾಗದ ಕೊಳಚೆ ಪ್ರದೇಶ ಇದೆ. ಆ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡ ಬೇಕೆಂದು ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಅನುಕೂಲ ಮಾಡಿಕೊಡ ಬೇಕೆಂದು, ಕೊಳಚೆ ನಿಪರ್ಮೂಲನ ಮಂಡಳಿ ಮತ್ತು ನಗರಪಾಲಿಕೆಯವರು ಹಲವಾರು ಕೆಲಸಗಳನ್ನು ಮಾಡುತ್ತಾ ಇದ್ದಾರೆ. ಹಾಗೆಯೇ ಜಮೀನ್ದಾರರ ಬಗ್ಗೆಯೂ ಕೂಡ ಮಾನವೀಯತೆಯ ದೃಷ್ಟಿ ಯಿಂದ ನೋಡಬೇಕು. ಅವರಲ್ಲಿ ಕೂಡ ಬಡವರು ಇರಬಹುದು. ಆದುದರಿಂದ ಕೋರ್ಟ್‌ನ ಹೊರಗಡೆ ಅವರೂ ಕೂಡ ಸರಕಾರದ ಜೊತೆಗೆ ಸಹಕಾರ ಮಾಡಿದರೆ, ಆ ಬಗ್ಗೆ ಶೀಘ್ರ ಪರಿಶೀಲನೆ ಮಾಡೋಣ. ಹೈದರಾಬಾದ್ ನಗರದಲ್ಲಿ ಒಂದು ಯೋಜನೆ ಈ ಬಗ್ಗೆ ಇದೆ. ಕೊಳಚೆ ಪ್ರದೇಶ ಹೆಚ್ಚಿಗೆ ಆದಾಗ, ಆ ಪ್ರದೇಶದಲ್ಲಿ ಸ್ವಲ್ಪ ಭಾಗವನ್ನು ಜಮೀನ್ದಾರರಿಗೆ ಬಿಟುಕೊಟ್ಟು, ಮಿಕ್ಕೆ ಭಾಗವನ್ನು ಸರಕಾರದವರು ತೆಗೆದುಕೊಂಡು ಅಭಿವೃದ್ಧಿ ಮಾಡುವ ಯೋಜನೆ ಅದಾಗಿದೆ. ಆ ಯೋಜನೆಯಂನ್ನು ನಾವುಗಳೂ ಮಾಡಬಹುದು. ಆ ದಿಶೆಯಲ್ಲಿ ಸರಕಾರ ಕೂಡ ಕ್ರಮ ತೆಗೆದು ಕೊಳ್ಳುವುದಕ್ಕೆ ಸಿದ್ಧವಿದೆ. ತಮ್ಮೆಲ್ಲರ ಸಹಕಾರ ಬೇಕು.

ಅಧ್ಯಕ್ಷರು.— ಈಗ ಮುಂದೂಡಲಾದ ಪ್ರಶ್ನೆಗಳು.

ಪ್ರಶ್ನೆ ಸಂಖ್ಯೆ ೪೫ (೪೧೬) ಶ್ರೀಯುತರುಗಳಾದ ಯು. ಭೂಪತಿ, ವೇದಾಂತ ಹೆಮ್ಮಿಗೆ ಜೆ. ಎಸ್. ದೊಡ್ಡಮೇಟಿ ಇವರು ಕೇಳಬೇಕು.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಈ ನಮ್ಮ ಜಿಲ್ಲಾ ಪರಿಷತ್‌ಗಳಿಗೆ ಚುನಾಯಿತ ರಾಗಿರತಕ್ಕಂಥ ರೈತರು ಸಾಮಾನ್ಯವಾಗಿ ಹಳ್ಳಿಗಳಿಂದ ಬಂದಿರತಕ್ಕಂಥಹವರು ಇರುತ್ತಾರೆ. ಅವರು ಅಲ್ಲಿ ಸಣ್ಣ ಮನೆಗಳಲ್ಲಿ ವಾಸವಾಗಿದ್ದು ಚುನಾವಣೆಗಳಲ್ಲಿ ಗೆದ್ದು ಬಂದಿರತಕ್ಕಂಥವರು. ಆ ಜನರನ್ನು ವೈಸೂರಿಗೆ ಕರೆದು ತಂದು ಎರಡು ಸಾವಿರ ರೂಪಾಯಿಗಳ ಬಾಡಿಗೆಮನೆಯನ್ನು ಮಾಡಿಕೊಟ್ಟು, ಅದರಲ್ಲಿ, ಕುರ್ಚಿಗಳು, ಟೇಬಲ್‌ಗಳು, ಸೋಫಾಗಳು, ಡೈನಿಂಗ್ ಟೇಬಲ್‌ಗಳು, ಹಾಗೂ ಕರ್ಟೈನ್ ಮುಂತಾದ ವೈಭವ ಸಲಕರಣೆಗಳನ್ನು ಒದಗಿಸಿಕೊಟ್ಟು ಇಂತಹ ಒಂದು ದೊಡ್ಡ ವ್ಯವಸ್ಥೆಯನ್ನು ಆ ರೈತಪ್ರತಿನಿಧಿಗಳಿಗೆ ಒಪ್ಪಿಸಿದ್ದೀರಿ, ಕಾವುಗಳು ಸಮಾಜವಾದಿಗಳೇ ಅಥವಾ ಲೋಹಿಯಾ ವಾದಿ ಗಳೇ ಎಂದು ಅರ್ಥವಾಗುತ್ತಿಲ್ಲ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಸಂಬಂಧಪಟ್ಟ ಯಾರಿಗೇ ಆಗಲೀ ಶಾಸನ ಬದ್ಧವಾದ ಸವಲತ್ತುಗಳನ್ನು ಒದಗಿಸಿಕೊಡುವುದು ಸಮಾಜವಾದಕ್ಕೆ ವಿರುದ್ಧವಾದುದು ಅಲ್ಲ. ಮಾನ್ಯ ಸದಸ್ಯರಿಗೆ

ಮಾತ್ರ ತಮ್ಮ ಸೌಲಭ್ಯಗಳು ತಮಗೆ ಇರಬೇಕು, ಇತರರಿಗೆ ಬೇಡ ಎಂಬ ಆಲೋಚನೆ ಏಕೆ ಹೊಳೆಯಿತೋ ನನಗೆ ತಿಳಿಯುತ್ತಿಲ್ಲ. ಇದು ಸಮಾಜವಾದದ ವಿರುದ್ಧವಾದ ಕಲ್ಪನೆ ಎಂದು ಭಾವಿಸಬೇಕಾಗುತ್ತವೆ.

ಶ್ರೀ ವೇದಾಂತ ಹೆಮ್ಮಿಗೆ.—ರೈತ ಇದನ್ನು ಉಪಯೋಗಿಸಬಾರದು ಎಂದು ಅಲ್ಲ ಇನ್ನೂ ಒಂದು ವರ್ಷದ ಕೆಲಸವು ಆಗಿಲ್ಲ. ಮೈಸೂರು ನಗರದಲ್ಲಿ ಎರಡು ಸಾವಿರ ರೂ.ಗಳ ಬಾಡಿಗೆ ಮನೆ ಪಡೆಯುವುದು ತಮಗೆ ಸಮಾಧಾನವೇ? ೫೦ ರೂ. ೧೦೦೦ ರೂ. ಮನೆಸಿಗುತ್ತಿರಲಿಲ್ಲವೇ? ಇವರಿಗೆ ಮನೆಗಳನ್ನು ಹುಡುಕಿಕೊಟ್ಟವರು ಅಧಿಕಾರಿಗಳೋ ಅಥವಾ ಇವರೇ ಹುಡುಕಿಕೊಂಡರೋ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಯಾರು ಹುಡುಕಿದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ೨,೫೦೦ ರೂ.ಗಳ ಮನೆ ಭತ್ಯಕ್ಕೆ ಅವಕಾಶ ಇದೆ. ಮೈಸೂರಿನಲ್ಲಿ ೨೦೦೦ ರೂ. ಗೆ ಎಂಥಾ ಮನೆ ಸಿಗಬಹುದು? ಎಂಥಾ ದೊಡ್ಡ ಪೈಭವದ್ದೇನೂ ಸಿಕ್ಕುವುದಿಲ್ಲ. ಏಕೆ ಮಾನ್ಯ ಹೆಮ್ಮಿಗೆಯವರಿಗೆ ಈ ಭಯಂಕರ ಪ್ರಶ್ನೆ ಹುಟ್ಟಿಕೊಂಡಿತೋ ಗೊತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಹೆಮ್ಮಿಗೆಯವರೇ, ಸಾಕು ಮುಂದಿನವರನ್ನು ಕರೆಯುತ್ತೇನೆ.

SRI VEDANTH HEMMIGE.—In page 111 of Z.P.Act, the duties and powers of Upadhyaksha is given which says thus.

"In the absence of Adhyaksha he will preside over the meeting of the Z.P. and perform such of the duties of Adhyaksh as the Adhyaksha may from time to time indicate and subject to rules... ಅಧ್ಯಕ್ಷರು ಇಲ್ಲದಿದ್ದರೆ ಉಪಾಧ್ಯಕ್ಷರು ಕೆಲಸ ಮಾಡುತ್ತಾರೆ. ಅಧ್ಯಕ್ಷರ ಪಾಲಿಸದನ್ನು ಅಧ್ಯಕ್ಷರು ಇದ್ದಾಗ ಕೆಲಸವೇ ಮಾಡುವುದಿಲ್ಲ. ಬರೀ ಸ್ಟ್ಯಾಂಡಿಂಗ್ ಕಮಿಟಿ ಅಧ್ಯಕ್ಷರಾಗಿರುತ್ತಾರೆ ಅಷ್ಟೇ ಇಂಥವರಿಗೆ ಅಂದರೆ ಉಪಾಧ್ಯಕ್ಷರಿಗೆ ಕಾರಿನ ಅವಶ್ಯಕತೆ ಇದೆಯೇ? ಏಕೆ ಕೊಟ್ಟಿದ್ದಾರೆ, ಹೇಳಲಿ.

ಅಧ್ಯಕ್ಷರು.—ನಿಮಗೂ ರೂಲ್ಸ್, ರೆಗ್ಯುಲೇಷನ್ ಹೇಳಿಕೊಡಬೇಕೇ ಈಗಾಗಲೇ ಪ್ರಶ್ನೆ ಅವಧಿ ಮುಗಿದಿರುವುದರಿಂದ ಯಾರು ಪ್ರಶ್ನೆ ಕೇಳುತ್ತಾರೋ ಅವರು ಒಂದು ಪ್ರಶ್ನೆ ಕೇಳಬಹುದು ಎಂದು ನಾನು ಹೇಳಿದ್ದೆ.

ಶ್ರೀ ವೇದಾಂತ ಹೆಮ್ಮಿಗೆ.—ಇದು ಕೊನೆಯದು ಅಧ್ಯಕ್ಷರೇ, ಅಧ್ಯಕ್ಷ, ಉಪಾಧ್ಯಕ್ಷರುಗಳ ಟಿಎ ಡಿಎ ಪೆಟ್ರೋಲ್ ಖರ್ಚು ಇವುಗಳ ಮೇಲೆ ಸರ್ಕಾರಕ್ಕೆ ಏನಾದರೂ ಕಡಿವಾಣ ಇದೆಯೇ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೇ, ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮಿನಿಸ್ಟರ್ ಆಫ್ ಸ್ಟೇಟ್ ಮತ್ತು ಉಪಾಧ್ಯಕ್ಷರಿಗೆ ಡೆಪ್ಯುಟಿ ಮಿನಿಸ್ಟರ್ ಸ್ಟೇಟಸ್ ಇದೆ. ಅದು ಅವರೂ ನಾವೂ ಎಲ್ಲ ಸೇರಿ ಕೊಟ್ಟಿರುವುದು. ಡೆಪ್ಯುಟಿ ಮಿನಿಸ್ಟರ್‌ಗೆ ಶಾಸನ ರೀತ್ಯಾ ಯಾವ್ಯಾವ ಸೌಲಭ್ಯ ಇರುತ್ತದೋ ಅವೆಲ್ಲಾ ಅವರು ಪಡೆಯಬಹುದು. ಅದನ್ನು ಏಕೆ ಕೊಟ್ಟಿದ್ದೀರಿ ಎಂದು ಕೇಳುವುದು ಸಾಧುವಾದುದಲ್ಲ ಶಾಸನಬದ್ಧವಾಗೇ ಏನಾದರೂ ಸ್ಪ್ರಿಕ್ಷನ್ಸ್ ಇದ್ದರೆ ಅದರ ಪ್ರಕಾರ ಎಲ್ಲಾ ನಡೆಯುವುದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ನನ್ನದೂ ಇದರಲ್ಲಿ ಇದೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗಳಿಗೆ ಪ್ರವಾಸ ಭತ್ಯಕ್ಕೆಂದು ಎಷ್ಟು ಖರ್ಚಾಗಿದೆ ಎಂದು ಜಿಲ್ಲಾವಾರು ವಿವರ ಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ಜಿಲ್ಲಾವಾರು ತಃಖ್ತೆಯನ್ನು ಆಸಂಬಂಧದಲ್ಲಿ ಕೊಟ್ಟಿದ್ದೇನೆ. ಅಧ್ಯಕ್ಷರೇ, ನಿನ್ನೆ ಮಾನ್ಯ ವೆಂಕಟರಾಮಯ್ಯನವರು ೭ ಕೋಟಿ ಖರ್ಚಾಗಿದೆ ಎಂದು ಹೇಳಿದ್ದು ಸರಿಯಲ್ಲ ೧೩ ಜಿಲ್ಲೆಗಳ ಪ್ರವಾಸ ಭತ್ಯಕ್ಕಾಗಿ ೩.೫೫ ಲಕ್ಷ ಮಾತ್ರ ಖರ್ಚಾಗಿದೆ.ಇನ್ನೂ ಆರು ಜಿಲ್ಲೆಯದು ಬಂದಿಲ್ಲ ಮತ್ತು ೨.೩೬ ಲಕ್ಷ ಉಪಾಧ್ಯಕ್ಷರ ಪ್ರವಾಸ ಭತ್ಯಕ್ಕಾಗಿ ಖರ್ಚಾಗಿದೆ ಒಟ್ಟು ೫.೮೬ ಲಕ್ಷ ೫ ತಿಂಗಳ ಅವಧಿಗೆ ಆಗಿದೆ, ಸ್ವಾಮಿ.